ರುಚಿಕರವಾದ ಉಪಹಾರ
ಸಿಹಿ–ಖಾರ ತಿಂಡಿಗಳು
**ನ್ಯೂ ಕೋರ್ಟ್ ರೆಸ್ಟೋರೆಂಟ್**
ಹೊಸ ಬಸ್‌ಸ್ಟ್ಯಾಂಡ್ ಬಳಿ
ಕುಂದಾಪುರ
ಫೋ : 232878

www.kundaprabha.com e-mail : kundaprabha@gmail.com

# ಕುಂದಪ್ರಭ

ವಾರಪತ್ರಿಕೆ

ಸ್ಥಾಪನೆ : 1948
7 ದಶಕಗಳ ವಿಶ್ವಾಸನೀಯ ಸೇವೆಯಲ್ಲಿ
**ಶೇಟ್ ಜ್ಯುವೆಲ್ಲರ್ಸ್**
ಶಂಕರ್ ಶೇಟ್ ಬಿಲ್ಡಿಂಗ್
ಮುಖ್ಯರಸ್ತೆ, ಕುಂದಾಪುರ
ಫೋನ್ : 230242

॥ ಸಂಪುಟ : 31 ॥ ಸಂಚಿಕೆ : 27। UDP/1263/2021-23 || RNI.NO.50495/91 ॥ ತಾರೀಕು: 03–08–2021 ॥ ರೂ 5/– ॥ ವಾರ್ಷಿಕ ಚಂದಾ : 350/– ಅಂಚೆಯಲ್ಲಿ : 500/

# ಅಜೇಂದ್ರ ಶೆಟ್ಟಿ –ಅನೂಪ್ ಶೆಟ್ಟಿ ದುರಂತ ಕಥೆ

ಸ್ನೇಹಿತರ ದಿನಕ್ಕೆ ಒಂದು ದಿನ ಮುನ್ನ ಒಬ್ಬ ಸ್ನೇಹಿತ ಇನ್ನೊಬ್ಬ ಸ್ನೇಹಿತನನ್ನು ಕೊಲೆ ಮಾಡಿದ ದುರ್ಘಟನೆ ನಡೆಯುತ್ತದೆ. ಗ್ರಾಮೀಣ ಪ್ರದೇಶದಲ್ಲಿ ತಲ್ಲಣ ಹುಟ್ಟಿಸಿದ ಈ ದುರಂತ ಕಥೆ ಒಬ್ಬ ಸ್ನೇಹಿತನ ಸಾವು , ಇನ್ನೊಬ್ಬ ಸ್ನೇಹಿತನಿಗೆ ಜೈಲು ಎಂಬಂತಾಗಿದೆ. ಅಜೇಂದ್ರ ಶೆಟ್ಟಿ ಹಾಗೂ ಅನೂಪ್ ಶೆಟ್ಟಿ ಕುಂದಾಪುರ ತಾಲ್ಲೂಕಿನ ಹತ್ತಿರದ ಗ್ರಾಮದವರು. ಹೈದರಾಬಾದ್‌ನಲ್ಲಿ ಹೆಚ್ಚು ನಿಕಟರಾಗಿ ಊರಿನಲ್ಲಿ ಆರ್ಥಿಕ ವ್ಯವಹಾರ ಆರಂಭಿಸಿದವರು. ಸಾರ್ವಜನಿಕವಾಗಿಯೂ ಉತ್ತಮ ಜನಸಂಪರ್ಕ ಹೊಂದಿದ್ದ ಅಜೇಂದ್ರ ಶೆಟ್ಟಿಯನ್ನು ಅನೂಪ್ ಶೆಟ್ಟಿ ಶುಕ್ರವಾರ ರಾತ್ರಿ ಇರಿದು ಕೊಲೆಗೈದು ಸ್ನೇಹಿತನ ಕತ್ತಿನಲ್ಲಿದ್ದ ಸರ ಹಾಗೂ ಹೊಸ ಕಾರು ಅಪಹರಿಸಿ ಗೋವಾಕ್ಕೆ ತೆರಳಿ ಕೊನೆಗೂ ಪೋಲೀಸರ ಅತಿಥಿಯಾಗಬೇಕಾಯಿತು. ಸ್ನೇಹ ಈ ರೀತಿಯಾಗಿ ಕೊನೆಗೊಂಡಿರುವುದು ಎಲ್ಲರಿಗೂ ಬೇಸರ ದುಃಖವುಂಟು ಮಾಡುವಂತಾಯಿತು. ಪೋಲೀಸರು ಆರೋಪಿ ಅನೂಪ್‌ನನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದು 7 ದಿನ ಪೋಲೀಸ್ ಕಸ್ಟಡಿಗೆ ನೀಡಲಾಗಿದೆ.


ಅಜೇಂದ್ರ ಶೆಟ್ಟಿ


ಆರೋಪಿ ಅನೂಪ್ ಶೆಟ್ಟಿ



ಕೋಟೇಶ್ವರ ಹಾಲಾಡಿ ರಸ್ತೆಯ ಕಾಳಾವರ ಸಮೀಪದ ಕಾಂಪ್ಲೆಕ್ಸ್‌ನಲ್ಲಿ ಫೈನಾನ್ಸ್ ಸಂಸ್ಥೆ ನಡೆಸುತ್ತಿದ್ದ ಅಜೇಂದ್ರ ಶೆಟ್ಟಿ (33)ಅವರನ್ನು ಶುಕ್ರವಾರ ತಡರಾತ್ರಿ ಕತ್ತು ಕೊಯ್ದು ಪಾಲುದಾರನೇ ಕೊಲೆಗೈದ ದುರ್ಘಟನೆ ನಡೆದಿದೆ.

ಕ್ಷಿಪ್ರ ಕಾರ್ಯಾಚರಣೆ ನಡೆಸಿದ ಪೋಲೀಸರು ಅಜೇಂದ್ರ ಅವರ ಫೈನಾನ್ಸ್ ಪಾಲುದಾರ ಅನೂಪ್ ಶೆಟ್ಟಿಯನ್ನು ಗೋವಾದಲ್ಲಿ ಬಂಧಿಸಿದ್ದಾರೆ. ಹಣಕಾಸಿನ ವೈಷಮ್ಯ ಕೊಲೆಗೆ ಕಾರಣ ಎಂದು ಜಿಲ್ಲಾ ಪೋಲೀಸ್ ವರಿಷ್ಠಾಧಿಕಾರಿ ಎನ್. ವಿಷ್ಣುವರ್ಧನ್ ತಿಳಿಸಿದ್ದಾರೆ.

**ಪಾಲುದಾರಿಕೆ ವ್ಯವಹಾರ :**

ಯಡಾಡಿ –ಮತ್ಯಾಡಿ ಗ್ರಾಮದ ಕೂಡಾಲು ನಿವಾಸಿ ಅಜೇಂದ್ರ ಶೆಟ್ಟಿ ಹಾಗೂ ಮೊಳಹಳ್ಳಿಯ ಅನೂಪ್ ಶೆಟ್ಟಿ ಪಾಲುದಾರಿಕೆಯಲ್ಲಿ 2017 ರಿಂದ ಡ್ರೀಮ್ ಫೈನಾನ್ಸ್ ಸಂಸ್ಥೆಯನ್ನು ನಡೆಸುತ್ತಿದ್ದರು.

ಸಾಮಾನ್ಯವಾಗಿ ರಾತ್ರಿ 10 ರೊಳಗೆ ಮನೆಗೆ ಬರುತ್ತಿದ್ದ ಅಜೇಂದ್ರ ಶೆಟ್ಟಿ ಬಾರದಿದ್ದಾಗ ಜು.30ರ ರಾತ್ರಿ 11.15ರ ಸುಮಾರಿಗೆ ಅಜೇಂದ್ರ ಅವರ ಸಹೋದರ ಮಹೇಂದ್ರ ಹಾಗೂ ಅವರ 3–4 ಮಂದಿ ಸ್ನೇಹಿತರು ಫೈನಾನ್ಸ್ ಕಚೇರಿಗೆ ಬಂದು ನೋಡಿದಾಗ ಅಜೇಂದ್ರ ರಕ್ತದ ಮಡುವಿನಲ್ಲಿ ಸೋಫಾದಲ್ಲಿ ಕುಳಿತ ಸ್ಥಿತಿಯಲ್ಲಿ ಪತ್ತೆಯಾದರು. ಕೂಡಲೇ ಕೋಟೇಶ್ವರದ ಖಾಸಗಿ ಆಸ್ಪತ್ರೆಗೆ ಕರೆದೊಯ್ದು ಪರೀಕ್ಷಿಸಿದ್ದು ವೈದ್ಯರು ಅದಾಗಲೇ ಮೃತಪಟ್ಟಿರುವುದಾಗಿ ಹೇಳಿದರು.

**ಸ್ನೇಹಜೀವಿ ಅಜೇಂದ್ರ** : ಅಜೇಂದ್ರ ಸ್ನೇಹಜೀವಿಯಾಗಿದ್ದು, ಯಾರೊಂದಿಗೂ ದ್ವೇಷ ಹೊಂದಿರಲಿಲ್ಲ. ಸಾಮಾಜಿಕ ಕಾರ್ಯಗಳಲ್ಲೂ ಮುಂಚೂಣಿಯಲ್ಲಿ ರುತ್ತಿದ್ದರು.

ಪ್ರಾಥಮಿಕ ತನಿಖೆ ಪ್ರಕಾರ ಪಾಲುದಾರ ಅನೂಪ್ ಆರೋಪಿಯೆಂದು ತಿಳಿದು ಬಂದಿದ್ದು , ಫೈನಾನ್ಸ್ ವಿಚಾರಕ್ಕೆ ಸಂಬಂಧಿಸಿದ ಹಣಕಾಸಿನ ವ್ಯವಹಾರದಲ್ಲಿ ವೈಮನಸ್ಸು ಕಾರಣವಾಗಿರಬಹುದು. ಅಜೇಂದ್ರ ಕುತ್ತಿಗೆಯಲ್ಲಿದ್ದ ಚಿನ್ನದ ಸರ ಕಳವಾಗಿದೆ. ಕಾರು ಖರೀದಿಸಿರುವ ಬಗ್ಗೆ ಅನೂಪ್‌ಗೆ ಅಸಮಾಧಾನವಿತ್ತು ಎಂದು ಅಜೇಂದ್ರ ಅವರ ಸಹೋದರ ಮಹೇಂದ್ರ ನೀಡಿರುವ ದೂರಿನಲ್ಲಿದೆ.

ಸೋಮವಾರ ಉಡುಪಿ ಜಿಲ್ಲಾ ಪೋಲೀಸ್ ವರಿಷ್ಠಾಧಿಕಾರಿ ವಿಷ್ಣು ವರ್ಧನ್ ಪತ್ರಿಕಾಗೋಷ್ಠಿ ನಡೆಸಿದ್ದು ಅನೂಪ್ ಶೆಟ್ಟಿ ತಾನು ಕೊಲೆಮಾಡಿದ್ದಾಗಿ ಒಪ್ಪಿಕೊಂಡಿದ್ದಾನೆ ಎಂದು ಹೇಳಿದರು. ಪ್ರಕರಣ ನಡೆದ ಮೇಲೆ ಗೋವಾಕ್ಕೆ ಪರಾರಿಯಾಗಿದ್ದ ಅನೂಪ್ ಶೆಟ್ಟಿಯನ್ನು ಕೊಲ್ವಾ ಬೀಚ್ ಬಳಿ ಬಂಧಿಸಲಾಗಿದೆ. ಆರೋಪಿ ಹಿಂದೆ ದುಬೈ ಹಾಗೂ ಸಿಂಗಾಪುರದಲ್ಲಿದ್ದು ನಂತರ ಊರಿನಲ್ಲಿ ಅಜೇಂದ್ರ ಶೆಟ್ಟಿಯೊಂದಿಗೆ ವ್ಯವಹಾರ ’ಮಾಡಿಕೊಂಡಿದ್ದ. ಪೋಲೀಸರು 24 ಘಂಟೆಯೊಳಗೆ ಆರೋಪಿಯನ್ನ ಬಂಧಿಸಿ ಪ್ರಶಂಸೆಗೊಳಗಾಗಿದ್ದಾರೆ ಎಂದು ಅವರು ಹೇಳಿದರು.

**ST. MARY'S P.U. COLLEGE, KUNDAPUR**

**Church Road, Kundapura**

**ADMISSIONS OPEN 2021-22**

Courses Offered

SCIENCE
→ Physics, Chemistry, Mathematics, Biology
→ Physics, Chemistry, Mathematics, Computer Science
(CET | JEE | NEET Coaching is available)

COMMERCE
→ History, Economics, Business Studies, Accountancy
→ Statistics, Economics, Business Studies, Accountancy
→ Comp.Science, Economics, Business Studies, Accountancy
(CA-CS FOUNDATIONS)

ARTS
→ History, Economics, Political Science, Sociology

LANGUAGES
→ English and Kannada / Hindi

QUALITY EDUCATION & EXCELLENT RESULTS IN THE PAST YEARS

Several Facilities For Students

CONTACT OFFICE DURING COLLEGE WORKING HOURS :
9606405335, 9483060450